**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 288/2023 |
| ಸಿ.ಡಬ್ಲೂ | 1 |
| ಪಿ.ಡಬ್ಲೂ | 2 |

| | | |
|---|---|---|
| ಹೆಸರು | :- | ಮಂಜುನಾಥ ಹಿರೇನಾಯ್ಕರ |
| ತಂದೆ/ಗಂಡನ ಹೆಸರು | :- | ಗೋವಿಂದಗೌಡ |
| ವಯಸ್ಸು | :- | 34 ವರ್ಷ |
| ಉದ್ಯೋಗ | :- | ಅಬಕಾರಿ ನಿರೀಕ್ಷಕರು ಬಾಗಲಕೋಟೆ |
| ವಾಸಸ್ಥಳ | :- | ಬಾಗಲಕೋಟೆ |

ಸಾಕ್ಷಿಯನ್ನು ದಿಃ20.09.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ**

1. ಜನೇವರಿ 2022 ರಿಂದ ಡಿಸೆಂಬರ್-2023 ರವರೆಗೆ ಮುಧೋಳ ವಲಯದಲ್ಲಿ ಅಬಕಾರಿ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. 2022 ನೇ ಸಾಲಿನ ಗಣೇಶ ಚತುರ್ಥಿ ಪ್ರಯುಕ್ತ ಬಾಗಲಕೋಟೆ ಜಿಲ್ಲಾದ್ಯಾಂತ ನಿಷೇದಾಜ್ಞೆ ಜಾರಿ ಇದ್ದ ಪ್ರಯುಕ್ತ ಮಾನ್ಯ ಅಬಕಾರಿ ಉಪ ಆಯುಕ್ತರ ಆದೇಶದಂತೆ ದಿಃ31.08.2022 ರಾತ್ರಿ 10-00 ಗಂಟೆಯಿಂದ ದಿಃ01.09.2022 ಬೆಳಿಗ್ಗೆ 6-00 ಗಂಟೆಯವರೆಗೆ ರಾತ್ರಿ ಗಸ್ತು ಕರ್ತವ್ಯದಲ್ಲಿ ಇದ್ದಾಗ, ನಾನು ಮತ್ತು ಸಿಬ್ಬಂದಿಯವರಾದ ಚಾಸಾ-2 ಮತ್ತು 3 ರವರು ಮುಧೋಳ ಶಹರ, ಲೋಕಾಪೂರ ಪಟ್ಟಣದಲ್ಲಿ ಗಸ್ತು ಕಾರ್ಯ ನಿರ್ವಹಿಸಿ, ಬೆಳಗಿನ ಜಾವ ಚಿಕ್ಕೂರ ತಾಂಡಾದಲ್ಲಿ ಗಸ್ತು ಕಾರ್ಯ ನಿರ್ವಹಿಸಿ ಚಿಕ್ಕೂರದಿಂದ ಚಿತ್ರಬಾನುಕೋಟೆ ಹೋಗುವ ರಸ್ತೆಯಲ್ಲಿ ಚಿಕ್ಕೂರದಿಂದ ಅಂದಾಜು 100 ಮೀಟರ ಅಂತರದಲ್ಲಿ ಇರುವ ಸೇತುವೆ ಹತ್ತಿರ ವಾಹನವನ್ನು ನಿಲ್ಲಿಸಿ ರಸ್ತೆಗಾವಲು ಮಾಡುತ್ತಿದ್ದೆವು. ಸ್ವಲ್ಪ ಸಮಯದ ನಂತರ ಚಿಕ್ಕೂರ ತಾಂಡಾ ಕಡೆಯಿಂದ ನಾವು ನಿಂತ ಕಡೆಗೆ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬರುತ್ತಿರುವುದು ಕಂಡು ಬಂದಿದ್ದು, ಸದರಿ ವಾಹನವನ್ನು ನಿಲ್ಲಿಸಲು ಸಿಬ್ಬಂದಿಯವರಿಗೆ ಸೂಚಿಸಿದೆನು. ಸರಕಾರಿ ವಾಹನ ಹಾಗೂ ನಮ್ಮನ್ನು ಕಂಡು ಸದರಿ ವ್ಯಕ್ತಿ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ಕಂಡು ಗಾಬರಿಯಿಂದ ಹಿಂದಿರುಗಿಸಬೇಕೆನ್ನುವಷ್ಟರಲ್ಲಿ ನಿಯಂತ್ರಣ ತಪ್ಪಿ ವಾಹನ ಅಲ್ಲಿಯೇ ಬಿಟ್ಟು ಓಡ ಹತ್ತಿದನು. ಆತನನ್ನು ಹಿಡಿಯಲು ಪ್ರಯತ್ನಿಸಿದರು ಕಬ್ಬಿನ ಗದ್ದೆಯಲ್ಲಿ ಓಡಿ ಪರಾರಿಯಾದನು.ನಂತರ ಸಿಬ್ಬಂದಿಯವರೊಂದಿಗೆ ಸ್ಥಳದಲ್ಲಿ ಯಾರು ಪಂಚರು ದೊರಕದ ಕಾರಣ ಇಲಾಖಾ ಸಿಬ್ಬಂದಿಯವರನ್ನು ಪಂಚರನ್ನಾಗಿ ತೆಗೆದುಕೊಂಡು ಸದರಿ ವಾಹನವನ್ನು ಪರಿಶೀಲಿಸುವ ಸಲುವಾಗಿ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.54 ರ ಪ್ರಕಾರ ಶೋಧನಾ ಸಮುಚ್ಚಿತ ಆಧಾರವನ್ನು ತಯಾರಿಸಿ ಸಿಬ್ಬಂದಿಗಳಿಗೆ ವಾಹನವನ್ನು ಪರಿಶೀಲಿಸಲು ಸೂಚಿಸಿದೆನು. ಸದರಿ ವಾಹನ ಬಿಳಿ ಮತ್ತು ನೀಲಿ ಬಣ್ಣದ

ಟಿ ವಿ ಎಸ್ ಕಂಪನಿಯ ಸ್ಕೂಟರ್ಸ್ ವಾಹನವಾಗಿದ್ದು, ಅದರ ನೋಂದಣಿ ಸಂಖ್ಯೆ ಕೆ.ಎ.48/ಆರ್.8512 ಆಗಿತ್ತು. ಸದರಿ ವಾಹನದ ಪಕ್ಕದಲ್ಲಿ ಬಿದಿದ್ದ ಕಪ್ಪು ಬಣ್ಣದ ಚೀಲ ಪರಿಶೀಲಿಸಲಾಗಿ ಅದರಲ್ಲಿ 100 ಎಮ್.ಎಲ್ ಸಾಮರ್ಥ್ಯದ 20 ಕಳ್ಳಭಟ್ಟಿ ಸಾರಾಯಿ ಪಾಕೆಟಗಳು ಇರುವುದು ಕಂಡು ಬಂದಿತು. ಸ್ಥಳದಲ್ಲಿ ವಾಹನ ಮತ್ತು ಮುದ್ದೆ ಮಾಲನ್ನು ಜಪ್ತುಪಡಿಸಿಕೊಂಡು ಜಪ್ತುಪಡಿಸಿದ ಎಲ್ಲಾ ಮುದ್ದೆ ಮಾಲನ್ನು ರಾಸಾಯನಿಕ ಪರೀಕೆಗೆ ಪ್ರತ್ಯೇಕವಾಗಿ ತೆಗೆದು ಕಪ್ಪು ಬಣ್ಣದ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಅರಗಿನಿಂದ ಸೀಲ್ ಮಾಡಲಾಯಿತು. ನಂತರ ಪಂಚರಾ ಇಲಾಖಾ ಸಿಬ್ಬಂದಿಗಳು ಹಾಗೂ ನಾನು ಸಹಿ ಮಾಡಿದ ಮಾದರಿ ಚೀಟಿಗಳನ್ನು ಬಾಟಲ ಮೇಲೆ ಅಂಟಿಸಲಾಯಿತು. ಸ್ಥಳದಲ್ಲಿಯೇ ಬೆಳಿಗ್ಗೆ 5–30 ಗಂಟೆಯಿಂದ 06-30 ಗಂಟೆಯವರೆಗೆ ಬರೆಯಲಾಯಿತು. ವಶಪಡಿಸಿಕೊಂಡ ಮುದ್ದೆ ಮಾಲು ಮತ್ತು ವಾಹನ ಸಹಿತ ಕಚೇರಿಗೆ ತೆಗೆದುಕೊಂಡು ಬಂದು ಸರಕಾರದ ಪರವಾಗಿ ಫಿರ್ಯಾದನ್ನು ತಯಾರಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿರುತ್ತೇನೆ. ಜಪ್ತಿ ಮಾಡಿಕೊಂಡ ಮುದ್ದೆ ಮಾಲುಗಳನ್ನು ಮೇಲಾಧಿಕಾರಿಯವರಿಗೆ ಹಸ್ತಾಂತರಿರುತ್ತೇನೆ. ಸದರಿ ವಾಹನವನ್ನು ನೋಡಿದರೆ ಗುರುತಿಸಬಲ್ಲೆನು. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಸಾಕ್ಷಿ ಗುರುತಿಸುತ್ತಾರೆ.

2. ಸಾಕ್ಷಿಗೆ ಈಗ ಶೋಧನಾ ಸಮುಚ್ಚಿತ ಆಧಾರ ತೋರುಸುತ್ತಿದ್ದು, ಅದರ ಮೇಲಿರುವ ಸಹಿಯನ್ನು ಗುರುತಿಸಿದ್ದರಿಂದ ಶೋಧನಾ ಸಮುಚ್ಚಿನ ಆಧಾರವನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸುತ್ತಿದ್ದು ಅದರ ಮೇಲಿನ ತಮ್ಮ ಸಹಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದೂರನ್ನು ತೋರುಸುತ್ತಿದ್ದು, ಅದರ ಮೇಲಿರುವ ಸಹಿಯನ್ನು ಗುರುತಿಸಿದ್ದರಿಂದ ದೂರನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರ.ವ.ವ ತೋರುಸುತ್ತಿದ್ದು, ಅದರ ಮೇಲಿರುವ ಸಹಿಯನ್ನು ಗುರುತಿಸಿದ್ದರಿಂದ ಪ್ರ.ವ.ವ ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲ್ ಮತ್ತು ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಸ್ವತ್ತಿನ ಪಟ್ಟಿಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು, ಸಾಕ್ಷಿಗೆ ಈಗ ಕಪ್ಪು ಬಣ್ಣದ ಚೀಲ ಮತ್ತು ಅದರಲ್ಲಿದ್ದ ಪೌಚಗಳನ್ನು ನೋಡಿ ಗುರುತಿಸಿದ್ದು ಎಲ್ಲವುಗಳನ್ನು ಸೇರಿ ಮುಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ.ಎಸ್.ಎಫ್.ಬಿ ವಕೀಲರಿಂದ ಶ್ರೀ.ಟಿ.ಆರ್.ಎಚ್ ವಕೀಲರ ಪರವಾಗಿ**

**ಆರೋಪಿ ಪರವಾಗಿ**

1. ಪಂಚರ ಹೆಸರನ್ನು ಪಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಯಾವ ಸಮಯಕ್ಕೆ ದೂರು ನೀಡಿದರೆ ಎಂದು ನೀವು ಪ್ರ.ವ.ವ ದಲ್ಲಿ ನಮೂದಿಸಿಲ್ಲ ಎಂದರೆ ಸರಿ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಮಗೆ ಯಾವುದೇ ಬಾತ್ಮಿ ಬಂದಿಲ್ಲ, ಪಂಚರನ್ನು ಬರಮಾಡಿಕೊಂಡಿಲ್ಲ, ಆರೋಪಿತ ಯಾವುದೇ ಕಳ್ಳಭಟ್ಟಿ ಸಾರಾಯಿ ಸಾಗಟ ಮಾಡುತ್ತಿರಲಿಲ್ಲ, ಆರೋಪಿತ ನಿಮ್ಮನ್ನು ನೋಡಿ ಓಡಿ ಹೋಗಿಲ್ಲ, ನೀವು ಯಾವುದೇ ಕಳ್ಳಭಟ್ಟಿ ಸಾರಾಯಿ ವಶಪಡಿಸಿಕೊಂಡಿಲ್ಲ, ರಾಸಾಯನಿಕ ಪರೀಕ್ಷೆಗೆ ಯಾವುದೇ ವಸ್ತು ತೆಗೆದಿಲ್ಲ, ಮುಮಾ-1 ಕ್ಕೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಸಂಖ್ಯೆಗಳಿಗೊಸ್ಕರ ಕಚೇರಿಯಲ್ಲಿ ಕುಳಿತು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮುಧೋಳ